ಮಂತಾ?' ಹೀಗೆ ತನ್ನ ಪ್ರವರ ಬಿಚ್ಚಿಟ್ಟ ಸುವರ್ಣ ನಡು ನಡುವೆ ಬ್ರೇಕ್ ತಗೊಂಡು ರಜಾ ಹೋದರೂ ಟೋಟಲೀ ಹತ್ತು ತಿಂಗಳು ನಮ್ಮಲ್ಲಿದ್ದಳು! 'ನಿಚ್ಚಾ ಇಚ್ಚೊರಿ ಕಡುಗ ಬರೋ ಬಸ್ಸಲ್ಲಿ ಸಿಕ್ಕುದಿಂಕ್ರ ಜಾಗುದಲ್ಲಿ ನುರಿಕಂದು ಬಂದಿಕವ್ವ' ಅಂತ ಪ್ರತಿಸಲವೂ ತಾನು ನಮ್ಮಲ್ಲಿಗೆ ಬರುವಾಗಿನ ಸಾಹಸಯಾತ್ರೆಯನ್ನು ಕಥೆ ಕಟ್ಟಿ ಹೇಳುತ್ತಿದ್ದಳು.

ಈ ನಡುವೆ- ಸಂಜೆ ಐದಾಯಿತೆಂದರೆ ಸಾಕು 'ಮುಂಚೇ ಕಡೆ ಹೋಗಣ ಅಜ್ಜೀ' ಅನ್ನುತ್ತ ನಮ್ಮತ್ತೆಯನ್ನು ವೀಲ್ಚೇರಲ್ಲಿ ಕೂರಿಸಿಕೊಂಡು ರಥಯಾತ್ರೆ ಮಾಡಿಸುವಂತೆ ಸಂಭ್ರಮಿಸುತ್ತ ವೆರಾಂಡ ತಲುಪಿ ಅಲ್ಲಿ ಅಜ್ಜಿಯನ್ನು ಪ್ರತಿಷ್ಠಾಪಿಸಿ ಅಲ್ಲೇ ತಾರ್ಸಿಗೆ ಹೋಗುವ ಮೆಟ್ಟಿಲ ಮೇಲೆ ಕೂತು ವೀಡಿಯೋ ಕಾಲ್ಮಾಡಿ ತನ್ನ 'ಹಿರಿಯಮ್ಮ'ನೊಂದಿಗೆ ಮಾತಾಡುತ್ತಾ ಅಲ್ಲಿ ಬಿಟ್ಟುಬಂದ ಹೆತ್ತಮ್ಮನ ಕುರಿತು ಕಣ್ಣಾರೆ ಅತ್ತು ವಿಚಾರಿಸಿಕೊಳ್ಳುತ್ತಿದ್ದ- ತೀರ್ಥಹಳ್ಳಿಯ ಭಾರತಿಯ ನೆನಪು ನುಗ್ಗಿ ಬರುತ್ತದೆ. ಆಗೆರಡು ವರ್ಷಗಳಿಂದ ಕ್ಯಾನ್ಸರ್ ಪೀಡಿತರಾದ ಅವರಮ್ಮನ ಮೊದಲ ಸಂತಾನವಾಗಿ ಹುಟ್ಟುವಾಗಲೇ ಅಪ್ಪನನ್ನು ಕಳಕೊಂಡವಳು ಈಕೆ. ಹೆಚ್ಚು ಓದಲಾಗದೇ ಆಯಾ ಕೆಲಸಕ್ಕೆಂದು ಬೆಂಗಳೂರಿನ ಶ್ರೀಮಂತ ನೆಂಟರ ಮನೆ ಸೇರಿಕೊಂಡಾಗ ಮಗಳಿಗೂ ತಿಳಿಸದೇ ಅವರಿವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಅಮ್ಮ ಮಗಳ ಮದುವೆಗೆಂದು ಗುಟ್ಟಾಗಿ ಸೇರಿಸಿಟ್ಟ ಹಣವೆಲ್ಲ 'ನೋಟು ಬಂದಿ'ಯ ಮೂಲಕ ಕೇವಲ ಕಾಗದದ ಚೂರುಗಳೆನ್ನಿಸಿಕೊಂಡ ವಿಷಯ ಅನಕ್ಷರಸ್ಥ ಅಮ್ಮನಿಗೆ ಅರ್ಥವಾಗದೇ ಕೊನೆಗೆ ತಾನೊಮ್ಮೆ ಊರಿಗೆ ಬಂದಾಗ ಬದಲಾವಣೆಯ ಅವಧಿ ಮೀರಿದ ಇಡುಗಂಟನ್ನು ಕಂಡು ಅಮ್ಮನನ್ನು ಹೇಗೆ ಸಮಾಧಾನ ಮಾಡುವುದೆಂದು ತಿಳಿಯದೇ ಕಂಗಾಲಾದವಳು.

ಇನ್ನು ಇವಳಮ್ಮನಂತೆಯೇ ಚೊಚ್ಚಲ ಹೆರಿಗೆಗೆಂದು ಆಸ್ಪತ್ರೆ ಸೇರಿ ಮಗ ಹುಟ್ಟಿದ ಸಂಭ್ರಮದಲ್ಲಿರುವಾಗಲೇ ಅಪಘಾತದಲ್ಲಿ ಗಂಡನನ್ನು ಕಳೆದುಕೊಂಡ ತಿ.ನರಸೀಪುರದ ವಸುಧಾ, ತನ್ನ ಸಾಧಾರಣ ರೂಪಿನಿಂದಾಗಿ ಮದುವೆಯಾಗದೇ ಸದಾ ಹೆತ್ತವರ ಕುಟುಕು ನುಡಿಗಳಿಂದ ತಪ್ಪಿಸಿಕೊಳ್ಳಲೋಸುಗ ಈ ಕೆಲಸಕ್ಕೆ ಸೇರಿದ ಸರಗೂರಿನ ಲತಾ- ಇವರಲ್ಲದೇ ಕುಟುಂಬದ ಆಕಸ್ಮಿಕ ಅವಘಡಗಳಿಂದ ಹೀಗೆ ಬಂದು ಹಾಗೆ ಹೋದ ಕೊಳ್ಳೇಗಾಲದ ಸರೋಜ, ಹುಣಸೂರಿನ ಪ್ರಿಯಾ, ಗುಂಡ್ಲುಪೇಟೆಯ ರಾಧಿಕಾ ಮತ್ತು ಕುಡುಕ ಗಂಡಂದಿರ ಗಲಾಟೆಗೆ ಹೆದರಿ ಬಂದ ಒಂದು ವಾರಕ್ಕೇ ಏಜೆನ್ಸಿಯವರ ಮೂಲಕ ದೂರದೂರಿಗೆ ಹಾಕಿಸಿಕೊಂಡ ನಂಜನಗೂಡಿನ ಸರಸು ಮತ್ತು ಶ್ರೀರಂಗಪಟ್ಟಣದ ವಿನುತ- ಇವರೆಲ್ಲ ಈಗಲೂ ಕಣ್ಮುಂದೆ ನಿಲ್ಲುತ್ತಾರೆ. ದಿನದ ಇಪ್ಪತ್ತನಾಲ್ಕು ಗಂಟೆಯೂ ಯಾರ್‍ಯಾರದ್ದೋ ಮನೆಯಲ್ಲಿದ್ದುಕೊಂಡು ತಮ್ಮ ತಮ್ಮ ಆಹಾರ ಕ್ರಮವನ್ನು ಅದುಮಿಟ್ಟು ಆ ಮನೆಯವರ ಆಹಾರ ಪದ್ಧತಿ, ಮಡಿಹುಡಿಗೆ ಒಗ್ಗಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ ಇವರಿಗೆಲ್ಲ ಅನಾಥಪ್ರಜ್ಞೆ ಕಾಡಬಾರದೆಂಬ ಕಾಳಜಿಯಿಂದ ಸ್ವತಃ ಅವರೇ ಅಡುಗೆ ಮನೆಗೆ ಹೋಗಿ ತಮಗೆ ಬೇಕಾದಷ್ಟನ್ನು ಬಡಿಸಿಕೊಳ್ಳುವ ಸ್ವಯಂ ಸೇವಾ ಪದ್ಧತಿಯನ್ನು ನಮ್ಮನೆಯಲ್ಲಿ ರೂಢಿ ಮಾಡಿಸಿದ್ದೆವು. (ಇಲ್ಲೊಂದು ಗುಟ್ಟೂ ಇದೆ ಅನ್ನಿ! ನಿವೃತ್ತಿಯಿಲ್ಲದೇ ದಿನಚರಿಯಲ್ಲಿ ಅನಿವಾರ್ಯವಾಗಿ ಮಾಡಲೇಬೇಕಾದ ಅಡುಗೆಮನೆ ಕೆಲಸಗಳೆಂದರೆ ಹೆಣ್ಣುಜನ್ಮಕ್ಕಂಟಿದ ಶಾಪವೆನ್ನುವ ಕೆಟಗರಿಗೆ ಸೇರಿದವಳು ನಾನು! ಸಾಲದ್ದಕ್ಕೆ ಪರದೇಶದಲ್ಲಿದ್ದ ನಮ್ಮಿಬ್ಬರು ಸುಪುತ್ರಿಯರು 'ಈ ವಯಸ್ಸಲ್ಲಿ ನೀನು ಅಡುಗೆ ಮನೆಯಲ್ಲಿ ಬೇಯೋದ್ಯಾಕೆ, ಅಪ್ಪಂಗೆ ಹೇಳಿ ಕೇಟ್ರಿಂಗ್ ವ್ಯವಸ್ಥೆ ಮಾಡ್ಕೊ' ಅಂದಿದ್ದರೂ ಕೇಟ್ರಿಂಗ್‌ನವರ ಮಸಾಲೆಯ ಖಾರ ಮತ್ತು ರ್‍ರೆಗ್ಯುಲರ್ ಟೈಮಿಂಗ್ಸನ್ನು ನಮ್ಮ ಹೊಟ್ಟೆ ರಿಜೆಕ್ಟ್ ಮಾಡಿದ್ದರಿಂದ ಕೇವಲ ಒಂದು ತಿಂಗಳಿಗೇ ಅದನ್ನು ನಿಲ್ಲಿಸಿದ್ದಾಯಿತು! ಮತ್ತೆ ಯಥಾಪ್ರಕಾರ ದಿನಸಿ ತರ್ಕಾರಿಗಳನ್ನೆಲ್ಲ ತಂದು ತಿಂಡಿ ಅಡುಗೆ ಮಾಡಿಟ್ಟರೂ ಬಡಿಸಿ ಉಪಚರಿಸುವ ಕೆಲಸ ಮಾತ್ರ ನನ್ನ ಜಾಯಮಾನಕ್ಕೇ ಒಗ್ಗದ್ದು! ಈ ವಿಷಯದಲ್ಲಿ ಅನೇಕ ಅನ್ನಪೂರ್ಣೆಯರ ಕುರಿತು ನನಗೆ ತುಂಬಾ ಹೊಟ್ಟೆಕಿಚ್ಚಿದೆ! ಏನು ಮಾಡೋಣ ಹೇಳಿ- ನನಗೆ ನನ್ನದೇ ಆದ 'ಸ್ಪೇಸ್' ಮೇಲೆ ವಿಪರೀತ ಮೋಹ!)

ಹೀಗೆ- ಒಂದೆರಡು ದಿನಗಳಿಂದ ಹಿಡಿದು ಹದಿನೈದು ಇಪ್ಪತ್ತು ದಿನಗಳ ತನಕ ಇದ್ದುಹೋದ ಇಂಥವರಿಗೆಲ್ಲ ಉಳ್ಳವರ ಬಾಯಲ್ಲಿ 'ಬಿಟ್ಟಿ ಭಾಗ್ಯ' ಅನ್ನಿಸಿಕೊಂಡ ಈಗಿನ ಗ್ಯಾರಂಟಿ ಯೋಜನೆಗಳೆಲ್ಲ